**B**

SL. No. : U

ಒಟ್ಟು ಪ್ರಶ್ನೆಗಳ ಸಂಖ್ಯೆ : 46 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 46 ] [ Total No. of Printed Pages : 8

**ಸಂಕೇತ ಸಂಖ್ಯೆ : 62-K**

**CCE RR**
**UNREVISED**

**Code No. : 62-K**

ಇಲ್ಲಿಂದ ಕತ್ತರಿಸಿ

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 28. 06. 2019 ] [ Date : 28. 06. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ] [ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 46 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 10 × 1 = 10

1. ಅಮೆರಿಕಾದ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿಯ ವೇಳೆ ತಂಗುವಂತಿಲ್ಲ ಏಕೆ ?
2. ಅಷ್ಟಾದಶಾಕ್ಷರೀ ಮಂತ್ರ ಯಾವುದು ?
3. ಅನಿಲ್ ಕುಂಬ್ಳೆಯವರು ಫಿರೋಜ್ ಷಾ ಕೋಟ್ಲಾ ಮೈದಾನದಲ್ಲಿ ಸಾಧಿಸಿದ ವಿಶ್ವದಾಖಲೆ ಯಾವುದು ?
4. ಅನಿಲ್ ಕುಂಬ್ಳೆಯವರು ಕ್ರಿಕೆಟ್ ಮಾತ್ರವಲ್ಲದೆ ಇನ್ನಾವ ಕಲೆಯಲ್ಲಿ ಹೆಸರು ಮಾಡಿದ್ದರು ?
5. ದೇಸಾಯಿ ಈಶಪ್ರಭು ಕಿಡಿಕಿಡಿಯಾದುದೇಕೆ ?
6. ಕೋಗಿಲೆಯ ಹಾಡಿನ ತರಂಗಗಳ ಪರಿಣಾಮ ಏನಾಗಿದೆ ?
7. ಕೆ.ಎಸ್. ನಿಸಾರ್ ಅಹಮದ್‌ರವರು ಎಲ್ಲಾ ಧರ್ಮಗಳ ಉಸಿರು ಒಂದೇ ಎಂದು ಹೇಳಿರುವುದು ಏಕೆ ?
8. ಕೇಡಾದ ನಂತರ ಯಾವುದರ ಚಿಂತೆಯೆಂದು ಅಂಬಿಗರ ಚೌಡಯ್ಯ ಹೇಳಿದ್ದಾರೆ ?
9. ಎಂಥವನು ಮಗನಲ್ಲವೆಂದು ಪುಲಿಗೆರೆ ಕವಿ ಸೋಮನು ಹೇಳಿದ್ದಾರೆ ?
10. ಧರ್ಮಪದನು ಕೊನಾರ್ಕ್ ದೇವಾಲಯಕ್ಕೆ ಏಕೆ ಬಂದನು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 10 × 2 = 20

11. ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುವುದು ಯಾವಾಗ ?
12. ನಿವೃತ್ತಿಯ ನಂತರವೂ ಕುಂಬ್ಳೆಯವರು ಕ್ರಿಕೆಟ್ ಸಂಪರ್ಕವನ್ನು ಹೇಗೆ ಉಳಿಸಿಕೊಂಡರು ?
13. ರಾಮಸಿಂಗನಿಗೂ–ಸಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.
14. ನಾ. ಕಸ್ತೂರಿಯವರ ಆರಂಭಿಕ ಜೀವನ ಹೇಗೆ ನಡೆಯಿತು ?
15. ನಾ. ಕಸ್ತೂರಿಯವರಿಗೆ ಸಂಕಟದ ವಿಷಯವಾದುದು ಯಾವುದು ?
16. ಮನುಷ್ಯ ಹೊಸ ಮನುಷ್ಯನಾಗುವುದು ಹೇಗೆ ?
17. ದೇಶದ ಪ್ರಗತಿ ಯಾವಾಗ ಸಾಧ್ಯವೆಂದು ಬಿ.ಆರ್. ಲಕ್ಷ್ಮಣರಾವ್‌ರವರು ತಿಳಿಸಿದ್ದಾರೆ ?
18. ರೈತನು ದನಕರುಗಳು ಹೇಗಾದವೆಂದು ಮಳೆರಾಯನಲಿ ನಿವೇದಿಸಿಕೊಳ್ಳುತ್ತಾನೆ ?
19. ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭವೇನು ?
20. ಈರಪ್ಪ ಎಂ. ಕಂಬಳಿಯವರು ಮುಂಡರಗಿಗೆ ಹೋಗಲು ಕೊಪ್ಪಳದ ಮಾರ್ಗವನ್ನು ಏಕೆ ಆಯ್ಕೆ ಮಾಡಿಕೊಂಡರು ?

**ಈ ಕೆಳಗಿನ ಹೇಳಿಕೆಗಳ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ :** 2 × 3 = 6

21. "ಸಾಕು ಮಾಡಿರಿ ನಿಮ್ಮ ಪುರಾಣ"

22. "ಬಡತನಕ್ಕೆ ಉಂಬುವ ಚಿಂತೆ"

23. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಕರ್ನಾಟಕ ವಂಗ ..................................................

.............................................................................

.............................................................................

.................................................................. ಒಂದೆ.

***ಅಥವಾ***

ನಾವು ನೀವು ...........................................................

.............................................................................

.............................................................................

.................................................................. ಇಂದೆ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

24. ಗೊರೂರು ರಾಮಸ್ವಾಮಿ ಅಯ್ಯಂಗಾರ್

25. ಚೆನ್ನವೀರ ಕಣವಿ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

26. ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರನ್ನು ಎದುರಿಸಿದ ಸಂದರ್ಭವನ್ನು ವಿವರಿಸಿರಿ.

***ಅಥವಾ***

ಬೆಳವಡಿ ಮಲ್ಲಮ್ಮಜಿ ತನ್ನ ಗಂಡನಿಗೆ ಕೊಟ್ಟ ಮಾತನ್ನು ಹೇಗೆ ಉಳಿಸಿಕೊಂಡಳು ವಿವರಿಸಿರಿ.

27. 'ದಾಸರ ಪದಗಳು' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

ಪುರಂದರದಾಸರು ತಿಳಿಸಿರುವ ಮನಸ್ಸನ್ನು ಶೋಧಿಸುವ ವಿಧಾನಗಳನ್ನು ವಿವರಿಸಿರಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

28. 'ಬಿನದ' ಪದದ ತತ್ಸಮ ರೂಪ

(ಎ) ವಿಹಾರ (ಬಿ) ಬಿಹಾರ

(ಸಿ) ವಿನೋದ (ಡಿ) ವಿನಯ

29. ಸಪ್ತಮಿ ವಿಭಕ್ತಿ ಪ್ರತ್ಯಯ

(ಎ) ಅಲ್ಲಿ (ಬಿ) ದೆಸೆಯಿಂದ

(ಸಿ) ಅನ್ನು (ಡಿ) ಅ

30. 'ಹೃದಯ ಕಮಲ' ಇಲ್ಲಿರುವ ಅಲಂಕಾರ

(ಎ) ಉಪಮಾನ (ಬಿ) ಉತ್ಪ್ರೇಕ್ಷೆ

(ಸಿ) ಲುಪ್ತೋಪಮ (ಡಿ) ರೂಪಕ

31. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುವ ವಾಕ್ಯ

(ಎ) ಸಾಮಾನ್ಯ (ಬಿ) ಮಿಶ್ರ

(ಸಿ) ದ್ವಂದ್ವ (ಡಿ) ಸಂಯೋಜಿತ

32. ಕ್ರಿಯಾ ಪದದ ಮೂಲರೂಪ

(ಎ) ಧಾತು (ಬಿ) ನಾಮಪ್ರಕೃತಿ

(ಸಿ) ವ್ಯಂಜನ (ಡಿ) ಗುಣಿತಾಕ್ಷರ

33. ನಾಮಪದದ ಬದಲಾಗಿ ಬಳಸುವ ಪದ

(ಎ) ಗುಣವಾಚಕ (ಬಿ) ಸರ್ವನಾಮ

(ಸಿ) ವಿಭಕ್ತಿ (ಡಿ) ನಾಮಪ್ರಕೃತಿ

34. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸುವಾಗ ಬಳಸುವ ಲೇಖನ ಚಿಹ್ನೆ

(ಎ) ವಿವರಣಾತ್ಮಕ (ಬಿ) ಭಾವಸೂಚಕ

(ಸಿ) ಉದ್ಧರಣ (ಡಿ) ಅಲ್ಪವಿರಾಮ

35. 'ಭೂಮಿ' ಪದದ ಸಮಾನಾರ್ಥಕ ರೂಪ

(ಎ) ಬೆಳೆ (ಬಿ) ಕಳೆ

(ಸಿ) ಇಳೆ (ಡಿ) ಮಳೆ

36. ರಮ್ಯ ಹಾಲನ್ನು ಕುಡಿದಳು. ಈ ವಾಕ್ಯದಲ್ಲಿರುವ ಕ್ರಿಯಾಪದದ ಕಾಲರೂಪ

(ಎ) ಅಪೂರ್ಣ ವರ್ತಮಾನ (ಬಿ) ವರ್ತಮಾನಕಾಲ

(ಸಿ) ಭವಿಷ್ಯತ್ ಕಾಲ (ಡಿ) ಭೂತಕಾಲ

37. ಮಕ್ಕಳು ಬೇಗಬೇಗನೆ ಶಾಲೆಗೆ ಬರುವಾಗ ಢಣಢಣ ಘಂಟೆ ಬಾರಿಸಿತು. ಈ ವಾಕ್ಯದಲ್ಲಿರುವ ದ್ವಿರುಕ್ತಿ

(ಎ) ಬೇಗಬೇಗ (ಬಿ) ಶಾಲೆಗೆ ಬರುವಾಗ

(ಸಿ) ಢಣಢಣ (ಡಿ) ಬಾರಿಸಿತು

38. 'ಧರ್ಮ' ಪದದ ವಿರುದ್ಧಾರ್ಥಕ ರೂಪ

(ಎ) ಪರಧರ್ಮ (ಬಿ) ಸ್ವಧರ್ಮ

(ಸಿ) ಸದ್ಧರ್ಮ (ಡಿ) ಅಧರ್ಮ

39. 'ರಾಜ್ಯೋತ್ಸವ' ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ ?

(ಎ) ಗುಣ ಸಂಧಿ (ಬಿ) ವೃದ್ಧಿ ಸಂಧಿ

(ಸಿ) ಯಣ್ ಸಂಧಿ (ಡಿ) ಲೋಪ ಸಂಧಿ

## ವಿಭಾಗ – 'ಸಿ'

### (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 4 × 1 = 4

ಬಹುತೇಕ ವಿದ್ಯಾರ್ಥಿಗಳು ತಮ್ಮ ವಿಫಲತೆಗೆ ಮನಸ್ಸನ್ನು ದೂರುತ್ತಾರೆ. 'ಮನಸ್ಸು ದುರ್ಬಲವಾಗಿದೆ, ಮನಸ್ಸು ಏಕಾಗ್ರತೆಗೊಳ್ಳುತ್ತಿಲ್ಲ' – ಇದು ವಿದ್ಯಾರ್ಥಿಗಳ ಸಾಮಾನ್ಯ ಸಮಸ್ಯೆ. ಮನಸ್ಸು ನಮ್ಮ ಅಂಕಿತದಲ್ಲಿರಬೇಕಾದ ಒಂದು ಸಾಧನವೇ ಹೊರತು ಮನಸ್ಸು ಆಡಿದಂತೆ ನಾವು ನಡೆಯಬೇಕಾಗಿಲ್ಲ ಎಂಬ ಅರಿವು ಮೂಡಿದಾಗ ಈ ಸಮಸ್ಯೆಗೆ ಪರಿಹಾರ ದೊರಕುವುದು. ಮನಸ್ಸಿನ ನಿಯಂತ್ರಣ ಸಾಧ್ಯವಾಗುವುದು ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ನಾವು ಅಭಿವೃದ್ಧಿ ಹೊಂದಿದಾಗ ಮಾತ್ರ. ಚಂಚಲತೆ ಮನಸ್ಸಿನ ಸಹಜಗುಣ. ಅದು ಅದರ ಪ್ರಕೃತಿ ಧರ್ಮ. ಸ್ವಾಮಿ ವಿವೇಕಾನಂದರು ಹೇಳುವಂತೆ ಈ ಪ್ರಕೃತಿಯೊಂದಿಗೆ ಹೋರಾಡುವುದೇ ನಿಜವಾದ ಜೀವನ. ಮನಸ್ಸನ್ನು ನಾವು ದೂರುವ ಬದಲು ಅದರ ಜೊತೆ ಸ್ನೇಹ ಬೆಳೆಸಲು ಪ್ರಯತ್ನಿಸಬೇಕು. ನಮ್ಮ ವಿವೇಚನಾ ಶಕ್ತಿಯನ್ನು ಮತ್ತು ಇಚ್ಛಾಶಕ್ತಿಯನ್ನು ಉಪಯೋಗಿಸಿ, ಮನಸ್ಸು ನಮ್ಮ ಮಾತನ್ನು ಕೇಳುವಂತೆ ಮಾಡಬಹುದು.

*ಪ್ರಶ್ನೆಗಳು :*

40. ವಿದ್ಯಾರ್ಥಿಗಳ ಸಾಮಾನ್ಯ ಸಮಸ್ಯೆ ಯಾವುದು ?

41. ಮನಸ್ಸಿನ ನಿಯಂತ್ರಣ ಯಾವಾಗ ಸಾಧ್ಯ ?

42. ಸ್ವಾಮಿ ವಿವೇಕಾನಂದರು ಹೇಳುವಂತೆ ನಿಜವಾದ ಜೀವನ ಯಾವುದು ?

43. ಮನಸ್ಸು ನಮ್ಮ ಮಾತನ್ನು ಕೇಳುವಂತೆ ಹೇಗೆ ಮಾಡಬಹುದು ?

44. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ *ಒಂದನ್ನು* ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

∗ ದೇಶ ಸುತ್ತು; ಕೋಶ ಓದು

∗ ಬೆಳೆಯುವ ಪೈರು ಮೊಳಕೆಯಲ್ಲಿ

∗ ಕೈ ಕೆಸರಾದರೆ; ಬಾಯಿ ಮೊಸರು

45. ನಿಮ್ಮನ್ನು ಮಂಗಳೂರಿನ ಹಂಪನಕಟ್ಟೆ ಬಡವಾಣೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ರಮೇಶ' ಎಂದು ಭಾವಿಸಿಕೊಂಡು, ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನೀವು ನಡೆಸುತ್ತಿರುವ ಸಿದ್ಧತೆಗಳನ್ನು ಕುರಿತು ಬೆಂಗಳೂರಿನಲ್ಲಿರುವ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ಬಳ್ಳಾರಿಯ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ 'ಮಹೇಶ್ವರಿ' ಎಂದು ಭಾವಿಸಿ, ನಿಮ್ಮ ವರ್ಗಾವಣೆ ಪತ್ರ ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೊಂದು ಅರ್ಜಿ ಬರೆಯಿರಿ.

46. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

* ಜಲಮಾಲಿನ್ಯಕ್ಕೆ ಕಾರಣಗಳು
* ದೂರದರ್ಶನ
* ಸ್ವಾತಂತ್ರ್ಯ ದಿನಾಚರಣೆ